# ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

ನಂ. 49, 4 ಮತ್ತು 5ನೇ ಮಹಡಿ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು - 560 001

ದೂರವಾಣಿ : 080-22265383 ಫ್ಯಾಕ್ಸ್ : 080-22267901

ವೆಬ್‌ಸೈಟ್ : www.kiadb.in ಇ-ಮೆಯಿಲ್ : ceoemkiadb@gmail.com


ಸಂಖ್ಯೆ :ಕಕೈಪ್ರಮಂ/Final Price-Vol-II 8925 /2015 -16 ದಿನಾಂಕ: 24-9-2015

## ಅಧಿಕೃತ ಜ್ಞಾಪನ

ವಿಷಯ: ಮಂಡಳಿಯ ಕೈಗಾರಿಕಾ ಪ್ರದೇಶಗಳಲ್ಲಿ ನಿವೇಶನ ಹಂಚಿಕೆ ಕೋರಿ ಸಲ್ಲಿಸುವ ಹಾಗೂ ಏಕ ಘಟಕ ಸಂಕೀರ್ಣಗಳು ಜಮೀನುಗಳನ್ನು ಭೂಸ್ವಾಧೀನಪಡಿಸಿ ಹಂಚಿಕೆ ಮಾಡಲು ಕೋರಿ ಸಲ್ಲಿಸುವ ಅರ್ಜಿಗಳೊಂದಿಗೆ ಮುಂಗಡ ಹಣವನ್ನು (Earnest Money Deposit) ಸ್ವೀಕರಿಸುವ ಬಗ್ಗೆ.

ಉಲ್ಲೇಖ: ಮಂಡಳಿ ಸಭೆಯ ದಿನಾಂಕ 14-8-2015.

-oOo-

ಮಂಡಳಿಯ ಕೈಗಾರಿಕಾ ಪ್ರದೇಶಗಳಲ್ಲಿ ಜಮೀನು ಹಂಚಿಕೆಗಾಗಿ ಅರ್ಜಿಗಳನ್ನು ಸಲ್ಲಿಸುವ ಸಂದರ್ಭದಲ್ಲಿ ಅರ್ಜಿದಾರರು ಎಕರೆ ಒಂದಕ್ಕೆ ರೂ.500/- ಗಳ ಮುಂಗಡ ಹಣವನ್ನು (Earnest Money Deposit) ಹಾಗೂ ಏಕ ಘಟಕ ಸಂಕೀರ್ಣಗಳಿಗಾಗಿ ಜಮೀನುಗಳನ್ನು ಭೂಸ್ವಾಧೀನಪಡಿಸಿ ಹಂಚಿಕೆ ಮಾಡಲು ಕೋರಿ ಸಲ್ಲಿಸುವ ಅರ್ಜಿಗಳೊಂದಿಗೆ ಎಕರೆ ಒಂದಕ್ಕೆ ರೂ.500/- ರಂತೆ ಗರಿಷ್ಟ ರೂ.10,000/- ಗಳಂತೆ ಮುಂಗಡ ಹಣವನ್ನು (Earnest Money Deposit) ಪಾವತಿಸಬೇಕಾಗಿತ್ತು.

ದಿನಾಂಕ 14-8-2015ರಂದು ನಡೆದ ಮಂಡಳಿ ಸಭೆಯಲ್ಲಿ ಮಂಡಳಿಯ ಕೈಗಾರಿಕಾ ಪ್ರದೇಶಗಳಲ್ಲಿ ಜಮೀನು ಹಂಚಿಕೆಗಾಗಿ ಅರ್ಜಿಗಳನ್ನು ಸ್ವೀಕರಿಸುವ ಸಂದರ್ಭದಲ್ಲಿ ಎಕರೆ ಒಂದಕ್ಕೆ ರೂ.500/- ಗಳ ಬದಲಿಗೆ ರೂ.5,000/- ಗಳ ಮುಂಗಡ ಹಣವನ್ನು (Earnest Money Deposit) ಸ್ವೀಕರಿಸಲು ನಿರ್ಣಯಿಸಲಾಗಿರುತ್ತದೆ.

ಆದಕಾರಣ, ತಕ್ಷಣದಿಂದ ಜಾರಿಗೆ ಬರುವಂತೆ ಮಂಡಳಿಯ ಕೈಗಾರಿಕಾ ಪ್ರದೇಶಗಳಲ್ಲಿ ನಿವೇಶನ ಹಂಚಿಕೆ ಕೋರಿ ಸಲ್ಲಿಸುವ ಅರ್ಜಿಗಳೊಂದಿಗೆ ಎಕರೆ ಒಂದಕ್ಕೆ ರೂ.500/- ಗಳ ಬದಲಿಗೆ ರೂ.5,000/-ಗಳ ಮುಂಗಡ ಹಣವನ್ನು (Earnest Money Deposit) ಸ್ವೀಕರಿಸಲು ಹಾಗೂ ಏಕ ಘಟಕ ಸಂಕೀರ್ಣಗಳಿಗಾಗಿ ಜಮೀನುಗಳನ್ನು ಭೂಸ್ವಾಧೀನಪಡಿಸಿ ಹಂಚಿಕೆ ಮಾಡಲು ಕೋರಿ ಸಲ್ಲಿಸುವ ಅರ್ಜಿಗಳೊಂದಿಗೆ ಎಕರೆ ಒಂದಕ್ಕೆ ರೂ. 5,000/- ಗಳಂತೆ ಗರಿಷ್ಟ ರೂ.5.00 ಲಕ್ಷಗಳವರೆಗೆ ಮುಂಗಡ ಹಣವನ್ನು (Earnest Money Deposit) ಸ್ವೀಕರಿಸಲು ಸೂಚಿಸಲಾಗಿದೆ.

ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಹಾಗೂ ಕಾರ್ಯನಿರ್ವಾಹಕ ಸದಸ್ಯರು

ಗೆ:

1. ವಿಶೇಷ ಜಿಲ್ಲಾಧಿಕಾರಿ, ಕ.ಕೈ.ಪ್ರ.ಮಂ.
2. ಕಾರ್ಯದರ್ಶಿ, ಕ.ಕೈ.ಪ್ರ.ಮಂ.
3. ಜಂಟಿ ನಿರ್ದೇಶಕ, ಕ.ಕೈ.ಪ್ರ.ಮಂ.
4. ಎಲ್ಲ ಅಭಿವೃದ್ಧಿ ಅಧಿಕಾರಿ ಹಾಗೂ ಕಾರ್ಯಪಾಲಕ ಅಭಿಯಂತರರು
5. ಎಲ್ಲ ವಿಶೇಷ ಭೂಸ್ವಾಧೀನಾಧಿಕಾರಿಗಳು
6. ಎಲ್ಲ ಸಹಾಯಕ ಕಾರ್ಯದರ್ಶಿಗಳು

ಪ್ರತಿ: ಮು.ಅ.ಅ. ಹಾಗೂ ಮು.ಅ./ಪ್ರಧಾನ ವ್ಯವಸ್ಥಾಪಕ/ಹ.ನಿ.ಅ. : ಮಾಹಿತಿಗಾಗಿ